# ವೀರಭಕ್ತ ಗಿರೀಶ್ ಚಂದ್ರ ಘೋಷ್

ಪ್ರವ್ರಾಜಿಕಾ ಪರಮಪ್ರಾಣಾ

(*ಹಿಂದಿನ ಸಂಚಿಕೆಯಿಂದ*)



ಗಿರೀಶ್ ಚಂದ್ರ ಘೋಷ್ ನಾಟಕಗಳಲ್ಲಿ ಅಭಿನಯಿಸುತ್ತಿದ್ದ ಕಾಲದಲ್ಲಿ, ಸಾಹಿತ್ಯದ ಉಳಿದ ಯಾವ ಅಂಗವೂ ನಾಟಕದಷ್ಟು ಜನರ ಮೇಲೆ ಪ್ರಭಾವ ಬೀರಲು ಸಾಧ್ಯವಾಗಿರಲಿಲ್ಲ. ಬಾಲ್ಯವಿವಾಹ, ವಿಧವಾವಿವಾಹ, ಜಮೀನುದಾರರ ದುರ್ನಡತೆ, ಭಾರತದ ಗುಲಾಮಗಿರಿ ಇತ್ಯಾದಿ ವಿಭಿನ್ನ ರೀತಿಯ ಸಮಾಜದ ಹಾಗೂ ದೇಶದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ ಜನರನ್ನು ಜಾಗೃತಗೊಳಿಸುವ ಕೆಲಸವನ್ನು ನಾಟಕರಂಗ ಅತ್ಯಂತ ಸಮರ್ಪಕವಾಗಿ ಮಾಡುತ್ತಿತ್ತು. "ನಾಟಕದ ಈ ಸ್ವರ್ಣಯುಗದಲ್ಲಿನ ಸ್ವರ್ಣಸಿಂಹಾಸನದಲ್ಲಿ ಗಿರೀಶನೇ ಚಕ್ರವರ್ತಿ" ('ವಂಗರಂಗ ಮಂಚ', ಪು. ೨೦).

ಬಯಲಾಟ ಹಾಗೂ ಹರಿಕಥೆಗಳ ಪ್ರೇಕ್ಷಕರನ್ನು ಆಧುನಿಕ ನಾಟಕ ರಂಗದ ನವೀನ ಭಾವನೆಗಳಿಗೆ, ವಿಚಾರಗಳಿಗೆ ಸ್ಪಂದಿಸುವಂತೆ ಮಾಡುವ ಕಠಿಣ ಕೆಲಸಕ್ಕೆ ಗಿರೀಶ್ ಘೋಷ್ ಕೈಹಾಕಿದ್ದನು. ಜೀವನದಲ್ಲಿ ಸಾವು, ನೋವು, ನಿಂದೆ, ಅಸೂಯೆಗಳ ಹೊಡೆತಕ್ಕೆ ಸಿಕ್ಕು ಗಿರೀಶನಂಥ ಶಕ್ತಿಶಾಲಿಯೂ ತತ್ತರಿಸಬೇಕಾಯಿತು. ಸೂಕ್ಷ್ಮಬುದ್ಧಿಯ, ವಿಚಾರಶೀಲನಾದ ಆತನು ಜೀವನದಲ್ಲಿ ಇದ್ದಕ್ಕಿದ್ದಂತೆ ಎದುರಾಗಿಬಿಡುವ ದ್ವಂದ್ವಗಳಿಂದ ಹೇಗೆ ಬಿಡುಗಡೆ ಪಡೆಯುವುದೆಂದು ಚಿಂತಿಸಿದನು. "ಇಂದ್ರಿಯಗೋಚರನಲ್ಲದ ಈಶ್ವರನನ್ನು ತರ್ಕ ಯುಕ್ತಿಗಳಿಂದ ಸಮರ್ಥಿಸಿ ಒಪ್ಪಿಕೊಳ್ಳುವ ಹಂತಕ್ಕೆ ಬಂದಾಗಲೇ ಸಂದೇಹವೆಂಬ ಮೊಸಳೆಯ ಆಕ್ರಮಣಕ್ಕೆ ತುತ್ತಾಗುತ್ತೇನೆ...." ಎಂದು ದುಃಖಿಸುತ್ತದೆ ಆತನ 'ಬಿಲ್ವಮಂಗಳ' ನಾಟಕದ ಒಂದು ಪಾತ್ರ.

ಗಿರೀಶ ಬೆಳಕಿಗಾಗಿ ಹುಡುಕಾಟವನ್ನು ಆರಂಭಿಸಿದನು. ಆತನನ್ನು ಜೀವನ್ಮರಣಗಳ ಇಕ್ಕಟ್ಟಿಗೆ ಸಿಕ್ಕಿಸಿದ ಎರಡು ಘಟನೆಗಳಿಂದ ಅವನ ಈ ಆಧ್ಯಾತ್ಮಿಕ ಅಭೀಪ್ಸೆ ಮತ್ತೂ ಸ್ಪಷ್ಟ ಆಕಾರವನ್ನು ತಾಳಿತು. ಒಮ್ಮೆ ಕೆಲಸಕ್ಕಾಗಿ ಮಧ್ಯಭಾರತದ ಭಗಲ್‌ಪುರಕ್ಕೆ ಗಿರೀಶ್ ಹೋಗಿದ್ದನು. ಅಲ್ಲಿ ಸ್ನೇಹಿತರೊಡನೆ ತಿರುಗಾಡುತ್ತಾ ಎದುರಿಗೆ ಕಂಡ ಆಳವಾದ ಕಂದರದೊಳಗೆ ಕುತೂಹಲದಿಂದ ಇಳಿದನು. ಆದರೆ ಮೇಲಕ್ಕೆ ಹತ್ತಿ ಬರಲಾಗದೆ ಗಾಬರಿಯಾಗಿ ಇತರರೊಡನೆ ಗಿರೀಶನೂ ಆರ್ತನಾಗಿ ಭಗವಂತನನ್ನು ಕರೆಯಬೇಕಾದ ಪರಿಸ್ಥಿತಿ ಒದಗಿ ಬಂದಿತು. ಈ ವಿಪತ್ತಿನಿಂದ ಆತ ಪವಾಡಸದೃಶವಾಗಿ ಪಾರಾಗಿ ಹೊರಗೆ ಬಂದನು. ಈ ಘಟನೆ ಅವನ ನಾಸ್ತಿಕತೆಗೆ ಸರಿಯಾಗಿ ಪೆಟ್ಟು ಕೊಟ್ಟಿತು. "....ಇನ್ನೆಂದಾದರೂ ದೇವರನ್ನು ಕರೆಯುವ ವ್ಯಾಕುಲತೆ ಉಂಟಾದರೆ ನನ್ನೆಲ್ಲಾ ಪ್ರೀತಿಯನ್ನು ಸುರಿದು ಆತನನ್ನು ಕರೆಯುತ್ತೇನೆ; ಸಾಯುವ ಭಯದಿಂದಲ್ಲ......" ಎಂದವನು ಆಗ ಉದ್ಗರಿಸಿದನು.

ಮತ್ತೊಂದು ಘಟನೆ ಹೀಗಿದೆ. ಮೊದಲ ಪತ್ನಿಯ ಮರಣದ ನಂತರ, ಗಿರೀಶ್ ೩೨ – ೩೩ ವರ್ಷದವನಾಗಿದ್ದಾಗ ಎರಡನೆಯ ವಿವಾಹವಾಯಿತು. ಇದಾದ ಆರು ತಿಂಗಳಿಗೆ ಅವನು ಕಾಲರಾ ರೋಗದಿಂದ ಹಾಸಿಗೆ ಹಿಡಿದನು. ಆಗಿನ ಕಾಲದಲ್ಲಿ ಈ ರೋಗಕ್ಕೆ ಔಷಧವಿರಲಿಲ್ಲ. ಆತ್ಮೀಯರು ಆತನು ಬದುಕುವ ಆಸೆಯನ್ನು ಕೈಬಿಟ್ಟರು. ಗಿರೀಶ್ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದನು. ಅರ್ಧಎಚ್ಚರದ ಅವಸ್ಥೆಯಲ್ಲಿ ಇದ್ದಕ್ಕಿದ್ದಂತೆ ಒಬ್ಬ ಮಹಿಳೆಯ ಆಕೃತಿಯನ್ನು ತೀರ ಹತ್ತಿರದಲ್ಲಿ ಕಂಡನು. "ಇಗೋ ಪ್ರಸಾದ. ...ಇನ್ನು ಭಯವಿಲ್ಲ" ಎನ್ನುತ್ತಾ ಆಕೆ ಪ್ರಸಾದವನ್ನು ಆತನ ಬಾಯಿಯೊಳಗಿಟ್ಟಳು. ಇದು ಕನಸೇ ಇರಬೇಕು. ಗಿರೀಶ್ ಸುಲಭಕ್ಕೆ ಇಂಥದಕ್ಕೆಲ್ಲ ಮಾರು ಹೋಗುವವನಲ್ಲ. ಆದರೂ ಈ ಘಟನೆ ಅವನ ಅಂತರಾಳವನ್ನು ಕಲಕಿತು. ಪೂರ್ತಿಯಾಗಿ ಎಚ್ಚರವಾದ ಮೇಲೆಯೂ, ತನ್ನ ನಾಲಗೆಯಲ್ಲಿ ಆ ಅಲೌಕಿಕ ಪ್ರಸಾದದ ರುಚಿ ಹಾಗೆಯೇ ಇತ್ತು ಎಂದು ಆತ ಮುಂದೆ ತನ್ನ ಗೆಳೆಯರಿಗೆ ಹೇಳಿಕೊಳ್ಳುತ್ತಿದ್ದ.

ಕ್ರಮೇಣ ಗಿರೀಶನ ನಾಟಕಗಳು ಹಾಗೂ ಕವಿತೆಗಳು ಭಕ್ತಿರಸದಿಂದ ತುಂಬಿ ತುಳುಕಲಾರಂಭಿಸಿದವು. ತನ್ನಲ್ಲಿ ಏಳುತ್ತಿದ್ದ

ಪ್ರಶ್ನೆಗಳ ಬಗ್ಗೆ ಅವನು ತನ್ನ ಹಿತೈಷಿಗಳ ಎದುರು ಹೇಳಿಕೊಂಡಾಗ ಅವರೆಲ್ಲರಿಂದ ಅವನಿಗೆ ಕಡೆಯದಾಗಿ ಸಿಕ್ಕಿದ್ದು ಒಂದೇ ಉತ್ತರ – "ಯೋಗ್ಯ ಗುರು ಸಿಕ್ಕರೆ ಈ ಸಂದೇಹಗಳು ದೂರವಾಗುತ್ತವೆ." ಈ ಉತ್ತರ ಗಿರೀಶನನ್ನು ರೇಗಿಸಿತು, "ಗುರು ಯಾರು? ಶಾಸ್ತ್ರದಲ್ಲಿ ಹೇಳಿದೆ, **ಗುರುರ್ಬ್ರಹ್ಮಾ ಗುರುರ್ವಿಷ್ಣುಃ** ಎಂದು. ರಕ್ತಮಾಂಸಗಳಿಂದಾದ ಒಬ್ಬ ಮನುಷ್ಯನ ಬಗ್ಗೆ ಈ ಮಾತನ್ನು ಹೇಗೆ ತಾನೆ ನಾನು ಹೇಳಲಿ?" ಗಿರೀಶ್ ಒಮ್ಮೆ ನಡೆದುಕೊಂಡೇ ತಾರಕೇಶ್ವರಕ್ಕೆ ಹೋದನು. ಆಗ ಅವನ ಮನಸ್ಸಿನಲ್ಲಿ ಘೋರ ಅಶಾಂತಿ ತಾಂಡವವಾಡುತ್ತಿತ್ತು. ಅಲ್ಲಿಯ ಪ್ರಸಿದ್ಧವಾದ ತಾರಕನಾಥ ಶಿವನ ಮಂದಿರಕ್ಕೆ ಹೋಗಿ ಶಿವನನ್ನು ಪೂಜಿಸಿ, ಏಕಾಗ್ರಮನಸ್ಸಿನಿಂದ ಹೀಗೆ ಪ್ರಾರ್ಥಿಸಿದನು: "ತಾರಕನಾಥ, ಈ ಸಂಶಯಗಳು ಕೊಡುತ್ತಿರುವ ಕಷ್ಟದಿಂದ ನನಗೆ ಮುಕ್ತಿಕೊಡು. ಸದ್ಗುರುವಿನ ಉಪದೇಶ ಸಿಗದಿದ್ದರೆ ಸಂಶಯಗಳು ದೂರವಾಗುವುದಿಲ್ಲವಂತೆ. ಹಾಗಾದರೆ ನನಗೊಬ್ಬ ಗುರುವನ್ನು ದಯಪಾಲಿಸು."

ಗಿರೀಶನ ಬಾಯಿಯಿಂದ ಕಡೆಗೂ ಈ ಮಾತು ಹೊರ ಹೊಮ್ಮಿತು: "ಗೀತೆಯಲ್ಲಿ ಹೇಳಿದೆ, ವ್ಯಾಕುಲತೆಯಿಂದ ಕರೆದವನಿಗೆ ನಾನು ಆಶ್ರಯಕೊಡುತ್ತೇನೆ ಎಂದು. ಇದು ಸತ್ಯವಾದ ಮಾತು. ಜೀವನದ ಆಘಾತಗಳ ನಡುವೆ, ಪ್ರಾರ್ಥನೆಯಿಂದ ನಾನು ಶಾಂತಿ ಪಡೆದಿದ್ದೇನೆ." ಈ ಸಮಯದಲ್ಲಿ ಗಿರೀಶನ ಮಾನಸಿಕ ಅವಸ್ಥೆ ಎಷ್ಟು ಉನ್ನತಮಟ್ಟಕ್ಕೆ ಏರಿತ್ತೆಂದು ನಾಟಕಕಾರ ಅಮೃತಲಾಲ ಬಸು ಹೀಗೆ ಹೇಳುತ್ತಾರೆ: "......ಗಿರೀಶ್ ಬಾಬುವಿನ ಜೀವನದಲ್ಲಿ ಒಂದು ಪರಿವರ್ತನೆ ಆರಂಭವಾಯಿತು. ಘೋರ ನಾಸ್ತಿಕನೂ ನಿರೀಶ್ವರ ವಾದಿಯೂ ಆಗಿದ್ದ ಅವರು, ಇದ್ದಕ್ಕಿದ್ದಂತೆ ಎಲ್ಲರೆದುರಿಗೇ 'ತಾಯಿ, ಓ ತಾಯಿ ಕಾಳಿ, ಕಾಳೀ' ಎಂದು ಕರೆಯುತ್ತಿದ್ದರು. ಆ ಭಾವದಲ್ಲಿಯೇ ತನ್ಮಯರಾಗಿಬಿಡುತ್ತಿದ್ದರು. ಒಮ್ಮೊಮ್ಮೆ ಅವರ ಮುಖ ಕೆಂಪಾಗಿ ತೇಜೋದ್ದೀಪ್ತವಾಗಿಬಿಡುತ್ತಿತ್ತು. ಅವರಲ್ಲೀಗ ದೇವರ ಬಗ್ಗೆ ಪೂರ್ಣ ವಿಶ್ವಾಸ ಉಂಟಾಗಿ ಕಾಳಿಯ ಆರಾಧಕರಾಗಿಬಿಟ್ಟರು."

ಗಿರೀಶ್ ಕೊಲ್ಕತಾದ ಪ್ರಸಿದ್ಧ ಕಾಳೀಘಾಟ್‌ನಲ್ಲಿನ ಕಾಳೀ ದೇವಾಲಯಕ್ಕೆ ಹೋಗಿ ದೇವಿಯ ಬಲಿಪೀಠದ ಹತ್ತಿರ ಕುಳಿತು ಪ್ರಾರ್ಥನೆಯಲ್ಲಿ ನಿರತನಾಗುತ್ತಿದ್ದನು. ಬಲಿಯ ಜಾಗದಲ್ಲಿ ಪ್ರಾಣವನ್ನು ಕಳೆದುಕೊಳ್ಳುವ ಪ್ರಾಣಿಗಳ ಆರ್ತನಾದದಿಂದಾಗಿ ದೇವಿಯ ವಿಶೇಷಕೃಪೆ ಅಲ್ಲಿ ಇರುತ್ತದೆಂದು ಆತನ ಭಾವನೆಯಾಗಿತ್ತು. ಈ ಸಮಯದಲ್ಲೊಮ್ಮೆ ಅವನು ಅಮೃತಲಾಲ ಬಸು ಮುಂತಾದವರಿಗೆ ಗರ್ವದಿಂದ ಹೇಳಿದನು, "ಆ ಹೆಂಗಸನ್ನು (ಕಾಳಿಯನ್ನು) ಹೃದಯ ತುಂಬಿ, ಬಾಯಿತುಂಬ 'ಅಮ್ಮಾ' ಎಂದು ಕೂಗಿ ಕರೆದು, ಕೇಳಿದ್ದನ್ನು ಕೊಡುವಂತೆ ಮಾಡಬಲ್ಲೆ."

ಈ ಹಮ್ಮು ಭಗ್ನವಾಗುವಂಥ ಒಂದು ಅನುಭವ ಆತನಿಗಾಯಿತು. ನಾಟಕ ಮುಗಿದ ಮೇಲೆ ಗಿರೀಶ್ ಒಮ್ಮೊಮ್ಮೆ ಜನ ಶೂನ್ಯವಾದ ಸ್ಟೇಜಿನ ಹಿಂಭಾಗದ ನಿರ್ಜನ ಪ್ರದೇಶದಲ್ಲಿ ಕುಳಿತು ಪ್ರಾರ್ಥನೆಯಲ್ಲಿ ಮಗ್ನನಾಗುತ್ತಿದ್ದನು. ಹಿಡಿದದ್ದನ್ನು ಸಾಧಿಸಿಯೇ ತೀರುವಂಥ ದೃಢ ಸಂಕಲ್ಪವುಳ್ಳ ಗಿರೀಶ್, ತನ್ನ ಮನಸ್ಸಿನ ಎಲ್ಲಾ ಶಕ್ತಿಯನ್ನೂ ಜಗನ್ಮಾತೆಯ ಆರಾಧನೆಯತ್ತ ಹರಿಸಿದನು. ಗಿರೀಶನಿಗೆ ಮತ್ತೊಂದು ವಿಚಾರ ತಿಳಿಯುವುದು ಬಾಕಿಯಿತ್ತು. ಪವಿತ್ರ ಮನಸ್ಸು ಏಕಾಗ್ರವಾದರೆ ಸಿಗುವ ಫಲ ಅಪವಿತ್ರ ಮನಸ್ಸಿನ ಏಕಾಗ್ರತೆಯಿಂದ ದಕ್ಕದು. ಪವಿತ್ರತೆ ಹಾಗೂ ಸಂಯಮಪೂರ್ಣ ಬದುಕಿನ ಮಹತ್ವದ ಅರಿವು ಮಾಡಿಕೊಳ್ಳುವ ಸಮಯವೀಗ ಆತನಿಗೆ ಪ್ರಾಪ್ತವಾಗಿದೆ.

ಆ ದಿನ ರಾತ್ರಿ ರಂಗವೇದಿಕೆಯ ಅಂಧಕಾರದಲ್ಲಿ ಒಬ್ಬನೇ ಕುಳಿತು ಜಗನ್ಮಾತೆಯನ್ನು ಕಾತುರನಾಗಿ ಕರೆಯುತ್ತಿದ್ದ ಗಿರೀಶ್‌ಘೋಷನಿಗೆ ಯಾವುದೋ ಒಂದು ದಿವ್ಯ ಶಕ್ತಿ ತನ್ನನ್ನು ಆವರಿಸುತ್ತಿರುವಂತೆ ಭಾಸವಾಯಿತು. ಒಂದು ಅಲೌಕಿಕ ಕಂಠಸ್ವರ ಅವನ ಅಂತರ್ಯದಲ್ಲಿ ಪ್ರತಿಧ್ವನಿತವಾಗುತ್ತ ತೀಕ್ಷ್ಣವಾಗಿ ಮೇಲೆದ್ದಿತು: "ಗಿರೀಶ್, ನೀನೀಗ ಕಣ್ಣು ತೆರೆದರೆ ಮಾತ್ರವೇ ನಾನು ಎದುರಿಗೆ ಬರುತ್ತೇನೆ! ಆದರೆ ಮೃತ್ಯುವನ್ನು ಸ್ವೀಕರಿಸಲು ಸಿದ್ಧನಾಗು. ಶವನಾಗದಿದ್ದರೆ ಶಿವನನ್ನು ಪಡೆಯಲು ಸಾಧ್ಯವಿಲ್ಲ!"

ಈ ಅನುಭವದಿಂದ ಗಿರೀಶ್ ತಲ್ಲಣಿಸಿ ಹೋದನು. ಅವನಿಗೆ ಮನೆಯಲ್ಲಿದ್ದ ತನ್ನ ಮಗನ ನೆನಪಾಯಿತು; ತನ್ನನ್ನೇ ಅವಲಂಬಿಸಿದ್ದ ನಟನಟಿಯರಿಗಾಗಿ ತಾನು ಬದುಕಲೇಬೇಕೆಂದು ತೀವ್ರವಾಗಿ ಅನ್ನಿಸತೊಡಗಿತು. ಆತ ಬಿಗಿಯಾಗಿ ಕಣ್ಣನ್ನು ಮುಚ್ಚಿಕೊಂಡೇ ಆರ್ತನಾಗಿ ಉದ್ಗರಿಸಿದನು, "ಬೇಡ! ನಾನು ನೋಡಲಾರೆ....." ಮತ್ತೆ ಆ ಧ್ವನಿ ಗುಡುಗಿನಂತೆ ಮೇಲೆದ್ದಿತು, "ಹಾಗಿದ್ದರೆ ನನ್ನನ್ನೇಕೆ ಕರೆದೆ? ಲೌಕಿಕ ಜೀವನದಲ್ಲಿ ನಿನಗೇನು ಬೇಕು ಹೇಳು, ಕೊಡುತ್ತೇನೆ." ಹೆದರಿ ತಟಸ್ಥನಾಗಿದ್ದ ಗಿರೀಶನ ಮನಸ್ಸು ತೀವ್ರವಾಗಿ ಆಲೋಚಿಸಿತು. ಭಯದಿಂದ ಅವನು ಚೀತ್ಕರಿಸಿದನು, "....ನನಗೆ ಏನೂ ಬೇಡ."

ಮತ್ತೆ ಧ್ವನಿ ಆರ್ಭಟಿಸಿತು, "ನಾನು ಬಂದಿದ್ದು ವ್ಯರ್ಥವಾಗುವಂತಿಲ್ಲ. .....ಈಗ ನನ್ನ ಎತ್ತಿದ ಖಡ್ಗ ನಿನ್ನ ಮೇಲೆ ಬೀಳಲಿದೆ. ಹೇಳು, ನಿನ್ನ ಜೀವನದಿಂದ ಏನನ್ನು ಕತ್ತರಿಸಿ ತೆಗೆದುಕೊಳ್ಳಲಿ?" ಗಿರೀಶ್ ಕೆಲವು ನಿಮಿಷ ಸ್ತಬ್ಧನಾಗಿದ್ದು ಅನಂತರ ದೃಢವಾಗಿ ಉತ್ತರಿಸಿದನು, "ತಾಯಿ, ಶ್ರೇಷ್ಠ ನಟ ಎಂದು ನಾನು ಪಡೆದ ಕೀರ್ತಿಯ ಮೇಲೆ ನಿನ್ನ ಖಡ್ಗ ಬೀಳಲಿ." ಗಿರೀಶ್ ನಂತರ ಹೇಳುತ್ತಿದ್ದನು, "ಈ ಅನುಭವದ ನಂತರ ಆತನ ನಾಟಕಾಭಿನಯ ಕಡಮೆಯಾಗುತ್ತ ಬಂದಿತು; ಒಳ್ಳೆಯ ಲೇಖಕನೆಂಬ ಹೆಸರೇ ಮೇಲುಗೈಯಾಯಿತು."

ಗಿರೀಶನ ನಾಟಕಗಳಂತೆ ಆತ ಬರೆದ ಹಾಡುಗಳೂ ಬಹು ಜನಪ್ರಿಯವಾದವು. ರವೀಂದ್ರನಾಥ ಠಾಕೂರರ ಅನೇಕ ಗೀತೆಗಳ ಮೇಲೆ ಗಿರೀಶನ ರಚನೆಗಳ ಛಾಯೆಯನ್ನು ವಿಮರ್ಶಕರು ಗುರುತಿಸುತ್ತಾರೆ. ದೇಶಪ್ರೇಮವನ್ನು ಜಾಗೃತಗೊಳಿಸುವ ಗಿರೀಶನ 'ಸಿರಾಜುದೌಲ' ನಾಟಕವನ್ನು ನೋಡಲು ಹೋಗಿದ್ದ ಲೋಕಮಾನ್ಯ ತಿಲಕ್, ನಾಟಕದ ನಂತರ ಗಿರೀಶನನ್ನು ಕಂಡು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಇದೇ ರೀತಿ ಅವನ 'ಛತ್ರಪತಿ ಶಿವಾಜಿ' ನಾಟಕವೂ ಸಮಾಜದಲ್ಲಿ ಕೋಲಾಹಲವನ್ನು ಉಂಟುಮಾಡಿತು. ಬ್ರಿಟಿಷ್ ಸರ್ಕಾರ ಈ ಎರಡೂ ನಾಟಕಗಳ ಪ್ರದರ್ಶನವನ್ನು ರದ್ದುಗೊಳಿಸಿತು.

(*ಮುಂದುವರಿಯುವುದು*)